ಪ್ರಸ್ತಾವ ಅಂಗೀಕಾರ

**ಶ್ರೀ ಎಸ್.ಆರ್. ಮೋರೆ** (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ."

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ ;

"2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವ ರೀತಿಯಲ್ಲಿ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

## 2. ಅಧ್ಯಕ್ಷರ ಅಪ್ಪಣೆ ಮೇರೆಗೆ

**ಅಧ್ಯಕ್ಷರು** : ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಸರ್ಕಾರದ ಉತ್ತರ.

### (ಅ) ಆರ್ಟಿಕಲ್ 371ರ ಮೇಲೆ ಚರ್ಚೆಗೆ ಅವಕಾಶ ನೀಡುವ ಬಗ್ಗೆ.

**ಶ್ರೀ ವೈಜನಾಥ್ ಪಾಟೀಲ್** : ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ನನಗೆ ಆಶ್ವಾಸನೆ ಕೊಟ್ಟಿದ್ದಿರಿ. ಆರ್ಟಿಕಲ್ 371 ರ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ತಾವು ನನಗೆ ಹೇಳಿದ್ದಿರಿ. ಆದಕಾರಣ ಆರ್ಟಿಕಲ್ 371 ರ ಮೇಲೆ ಚರ್ಚೆ ಮಾಡಲು ದಯಮಾಡಿ ನನಗೆ ಒಂದರ್ಧ ಗಂಟೆ ಅವಕಾಶ ಮಾಡಿಕೊಡಬೇಕು.

### (ಆ) ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆಗೆ ಅವಕಾಶ ಕೋರಿ ಚರ್ಚೆ

**ಶ್ರೀ ಧರ್ಮಸಿಂಗ್** (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ 11.15 ರವರೆಗೂ ಕುಳಿತಿದ್ದೇವೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಗಿದಿದ್ದು ನಾಳೆ ದಿವಸ ಸರ್ಕಾರ ರಿಪ್ಲೈ ಕೊಡುತ್ತದೆ ಎಂದು ಸದನದಲ್ಲಿ ತಾವೇ ಅನೌನ್ಸ್ ಮಾಡಿದ್ದೀರಿ. ಆಮೇಲೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡಲಿಲ್ಲ ಎನ್ನುವ ಒಂದು ವಿಚಾರ ಇದೆ. ನಾನು ಉತ್ತರ ಕೊಟ್ಟ ಮೇಲೆ ಕ್ಲಾರಿಫಿಕೇಷನ್‌ನಲ್ಲಿ ಬೇಕಾದರೆ ಅವರು ಕೇಳಬಹುದು.

**ಶ್ರೀ ವಾಟಾಳ್ ನಾಗರಾಜ್** : ನಾನಗೆ ಮಾತನಾಡಲು ಅವಕಾಶ ಕೊಡಬಾರದೆ ?

**ಶ್ರೀ ಎನ್. ಧರ್ಮಸಿಂಗ್** : ಅದು ಅಧ್ಯಕ್ಷರಿಗೆ ಬಿಟ್ಟ ವಿಚಾರ. ನೀವು ಎಲ್ಲಿಯವರೆಗೆ ಚರ್ಚೆ ಮಾಡುತ್ತೀರಿ ಅದನ್ನು ನಾವು ಕೇಳುತ್ತೇನೆ. ನಾವೇನೂ ಅಭ್ಯಂತರ ಮಾಡುವುದಿಲ್ಲ. ಆದರೆ ಈಗ ಎಲ್ಲಾ ಚರ್ಚೆ ಮುಗಿದುಹೋಗಿದೆ.

(ಗೊಂದಲ)

**ಅಧ್ಯಕ್ಷರು** : ಈ ವಿಚಾರದಲ್ಲಿ ನನದೇನೂ ಪ್ರಸ್ಟೀಜ್ ಯಾವುದೂ ಇಲ್ಲ. ನಿನ್ನೆಯ ದಿನ ರಾತ್ರಿ 11.30 ರವರೆಗೂ ಸದನದಲ್ಲಿ ಚರ್ಚೆ ನಡೆದಿದೆ. ನಾವು ನಿನ್ನೆಯೇ ರಾಜ್ಯಪಾಲರ ಭಾಷಣದ ಮೇಲೆ ಇವೊತ್ತು ಚರ್ಚೆ ಮತ್ತು ನಾಳೆ ಉತ್ತರ ಎಂದು ಹೇಳಿ ಚರ್ಚೆಯನ್ನು ನಿನ್ನೆಯೇ ಎಷ್ಟು ಹೊತ್ತಾದರೂ ಮುಗಿಸಬೇಕು ಎಂದು ಸಭಾನಾಯಕರು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರು